## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : **2016-17ನೇ** ಸಾಲಿನ ನೂತನ ಸೌರಬೆಳಕು ಯೋಜನೆಯಡಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 73 ಜೈಅಯೋ 2016, ದಿನಾಂಕ 17.10.2016.
2. ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 36 ಜೈಅಯೋ 2016, ದಿನಾಂಕ 29.07.2016.

### ಪ್ರಸ್ತಾವನೆ

**2016-17**ನೇ ಸಾಲಿನ ಆಯವ್ಯಯದಲ್ಲಿ ನೂತನ ಸೌರಬೆಳಕು ಯೋಜನೆಯ ಅನುಷ್ಠಾನಕ್ಕಾಗಿ **ರೂ.400.00ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2810-00-101-0-91(2810-01-198-1-01-300)**ರಡಿ ಒದಗಿಸಿದೆ.

**ಮೇಲೆ** (1)ರಲ್ಲಿ ಓದಲಾದಂತೆ, **2016-17**ನೇ ಸಾಲಿನಲ್ಲಿ ನೂತನ ಸೌರಬೆಳಕು ಯೋಜನೆಯಡಿ ಹೊರಡಿಸಲಾದ ಮಾರ್ಗಸೂಚಿಯನ್ವಯ ಪ್ರಾಯೋಗಿಕ ಜಿಲ್ಲೆಗಳಾದ **ಬಾಗಲಕೋಟೆ, ಗದಗ, ಕಲಬುರಗಿ, ಮೈಸೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ** ಜಿಲ್ಲೆಗಳಿಗೆ ಯೋಜನೆಯ ಪ್ರಾಥಮಿಕ ಚಟುವಟಿಕೆ / ಅನುಷ್ಠಾನಕ್ಕಾಗಿ **ರೂ.200.00ಲಕ್ಷಗಳನ್ನು** ಬಿಡುಗಡೆ ಮಾಡಿದೆ. ಇನ್ನುಳಿದ ರೂ.200.00ಲಕ್ಷಗಳ ಪೈಕಿ ರೂ.10.00ಲಕ್ಷಗಳನ್ನು ಮಾರ್ಗಸೂಚಿಯನ್ವಯ ತುರ್ತಾಗಿ ಕಾರ್ಯಕ್ರಮದ ಅನುಷ್ಠಾನ ಕಾರ್ಯವನ್ನು ಪೂರ್ಣಗೊಳಿಸುವ ಪ್ರಾಯೋಗಿಕ **ಜಿಲ್ಲೆಗೆ** ಬಿಡುಗಡೆ ಮಾಡುವ ಕುರಿತಂತೆ ಕಾಯ್ದಿರಿಸಿ**ಕೊಂಡು** ಹಾಲಿ **ಎರಡನೇ ಕಂತಿನ** ಅನುದಾನ **ರೂ.190.00ಲಕ್ಷಗಳನ್ನು** ಕೇಂದ್ರೀಕೃತ ಸೌರ ವಿದ್ಯುತ್ ಘಟಕವನ್ನು ಅಳವಡಿಸಿ ಸೌರ ಬೀದಿ ದೀಪಗಳನ್ನು ಅನುಷ್ಠಾನಗೊಳಿಸಲು ಪ್ರಾಯೋಗಿಕ ಜಿಲ್ಲೆಗಳಾದ **ಬಾಗಲಕೋಟೆ, ಗದಗ, ಕಲಬುರಗಿ, ಮೈಸೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ** ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 73 ಜೈಅಯೋ 2016, ಬೆಂಗಳೂರು, ದಿನಾಂಕ 15.12.2016.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2016-17**ನೇ ಸಾಲಿನಲ್ಲಿ ನೂತನ ಸೌರಬೆಳಕು ಯೋಜನೆ ಅನುಷ್ಠಾನಕ್ಕಾಗಿ **ರೂ.190.00ಲಕ್ಷಗಳನ್ನು**(ಒಂದು ನೂರು ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) **ಲೆಕ್ಕ ಶೀರ್ಷಿಕೆ 2810-00-101-0-91(2810-01-198-1-01-300) (ಯೋಜನೆ)**ರಡಿ ಕೆಳಕಂಡ ಏಳು ಪ್ರಾಯೋಗಿಕ ಜಿಲ್ಲೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಜಿಲ್ಲೆ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1. | ಗದಗ | 27.14 |
| 2. | ಬಾಗಲಕೋಟೆ | 27.16 |
| 3. | ಕಲಬುರಗಿ | 27.14 |
| 4. | ಮೈಸೂರು | 27.14 |
| 5. | ರಾಮನಗರ | 27.14 |
| 6. | ಕೋಲಾರ | 27.14 |
| 7. | ಚಿಕ್ಕಬಳ್ಳಾಪುರ | 27.14 |
| | **ಒಟ್ಟು** | **190.00** |

-

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನ, ವೆಚ್ಚದ ವಿವರ ಹಾಗೂ ಪ್ರಾಯೋಗಿಕ ಗ್ರಾಮಗಳ ವಿವರಗಳನ್ನು ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಇಂಧಿಕರಿಸತಕ್ಕದ್ದು.

ಬಿಡುಗಡೆ ಮಾಡಿದ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೆ ಒಳಪಟ್ಟಿದ್ದು ಪ್ರಸಕ್ತ ಸಾಲಿನಲ್ಲೇ ಸಂಪೂರ್ಣವಾಗಿ ಉದ್ದೇಶಿತ ಯೋಜನೆಗೆ ಮಾತ್ರ ವಿನಿಯೋಗಿಸಿ, ಹಣ ಬಳಕೆ ಪ್ರಮಾಣ ಪತ್ರನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಇಲಾಖಾ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ ಗ್ರಾಅಪ 609/ಪಿಬಿಎಸ್/2016, ದಿನಾಂಕ 29.11.2016ರಲ್ಲಿ ಆಡಳಿತ ಇಲಾಖೆಯ ಮುಖ್ಯಸ್ಥರಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ/03/ಟಿಎಫ್‌ಪಿ/2016, ದಿನಾಂಕ 02.04.2016ರನ್ವಯ ಪ್ರತ್ಯೋಜಿಸಲಾದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

16/12/16

(ಡಾ: ಭುವನಹಳ್ಳಿ ನಾಗರಾಜ್)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ :

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಪ್ರಾಯೋಗಿಕ ಜಿಲ್ಲೆಗಳಾದ ಬಾಗಲಕೋಟೆ, ಗದಗ, ಕಲಬುರಗಿ, ಮೈಸೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ.
3. ಉಪ ಕಾರ್ಯದರ್ಶಿ (ಅಭಿವೃದ್ಧಿ)/ಯೋಜನಾ ನಿರ್ದೇಶಕರು / ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ, ಗದಗ, ಕಲಬುರಗಿ, ಮೈಸೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ.
4. ಜಿಲ್ಲಾ ಖಜಾನಾಧಿಕಾರಿಗಳು, ಬಾಗಲಕೋಟೆ, ಗದಗ, ಕಲಬುರಗಿ, ಮೈಸೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ.
5. ಉಪ ನಿರ್ದೇಶಕರು, Network Management Center ಖನಿಜ ಭವನ ಬೆಂಗಳೂರು.
6. ವಿಶೇಷ ಅಧಿಕಾರಿ, ಗಣಕ ಕೋಶ, ಗ್ರಾಅಪಂ ಇಲಾಖೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)ರವರ ಆಪ್ತ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ.